ಚಿಕ್ಕಬಳ್ಳಾಪುರ ಭಾಷೆಯ ಸೌಂದರ್ಯ ಇರೋದೆ ಕೂಡುವಿಕೆಯಲ್ಲಿ. ಹಾಗಾಗಿ ಮೊರಸುಗನ್ನಡ ಅನ್ನೋದು ಸಂಕರ ಅನ್ನೋದಕ್ಕಿಂತ ಅಚ್ಚ ಕೂಡಿಕೆ ಪದ.

ತೆಲುಗಿನಲ್ಲಿ ಒಂದು ಕೆಲಸ ಆಗ್ತಾ ಇದೆ. ಇತ್ತೀಚಿನ ಕೆಲವರು ಪರ್ಯಾಯ ಪದಗಳನ್ನ ಕಟ್ತಾ ಇದಾರೆ. ಈಗ ಕೃತಜ್ಞತೆ ಅನ್ನೋದಕ್ಕೆ 'ನೆನರ್ಲು' ಅಂತ ಬಳಸ್ತಾ ಇದಾರೆ. ಚಿರುನಾಮ ಅನ್ನೋದು ಸರಿ ಇಲ್ಲ; ಕನ್ನಡದಲ್ಲಿ ವಿಳಾಸ ಅಂತ ಇದೆ, ಅದನ್ನೇ ಬಳಸಬಹುದು ಅಂತ ಒಬ್ಬರು ಬರೆದಿದ್ದಾರೆ. ಅಂದರೆ ಹಿಂದೆಯೂ ತೆಲುಗಿನ ಮೇಲೆ ಕನ್ನಡದ ಪ್ರಭಾವ ಇತ್ತು. ಹಾಗೆಯೇ ಕನ್ನಡದ ಮೇಲೆ ತೆಲುಗಿನ ಪ್ರಭಾವವೂ. ಅದು ಈ ಇಪ್ಪತ್ತೊಂದನೇ ಶತಮಾನದಲ್ಲೂ ಮುಂದುವರೆದಿದೆ. ಭಾಷಿಕ ಸಂಬಂಧವಾಗಿ ತೆಲುಗು ಕನ್ನಡವನ್ನ ಆಗಿನಿಂದಲೂ ಗಮನಿಸ್ತಾನೆ ಇದೆ. ಹಾಗಾಗಿ ಮೊರಸುನಾಡು ಮಟ್ಟಿಗೆ ತೆಲುಗು, ಕನ್ನಡ, ತಮಿಳು ವಿಚಾರಕ್ಕೆ ಬಂದಾಗ 'ಎರವಲು' ಪದ ಬಳಸಲಿಕ್ಕಾಗಲ್ಲ. 'ಎರವಲು' ಜಾಗದಲ್ಲಿ 'ಬಳಸಲು' ಬರುತ್ತೆ.

**◆ ಮೊರಸುಗನ್ನಡವನ್ನೆ ಪೂರ್ಣ ಪ್ರಮಾಣದಲ್ಲಿ ಬಳಸಿ ಬರೆದ ಹಲವು ಕೃತಿಗಳು ಅವಿಭಜಿತ ಚಿಕ್ಕಬಳ್ಳಾಪುರ-ಕೋಲಾರ ಜಿಲ್ಲೆಯ ಭಾಗದಿಂದ ಬಂದಿವೆ. ಉದಾಹರಣೆಗೆ 'ಗೂಡು ದೀಪವು ಆರಿದೆದೆಯಲಿ', 'ಋಣ', 'ನಾಗ್ದಾಳೆ', 'ಧಾವತಿ'... ಸದ್ಯಕ್ಕೆ ನೆನಪಿಗೆ ಬಂದ ಹಾಗೆ ಇಷ್ಟು. ನೀವೂ ಹಲವಾರು ಕಥೆ, ಕವಿತೆಗಳನ್ನು ಮೊರಸುಗನ್ನಡದಲ್ಲೆ ಬರೆದಿರುವಿರಿ. 'ಗನ್ನೇರಿ' ಖಂಡಕಾವ್ಯದಲ್ಲೂ ಸಾಕಷ್ಟು ಬಳಸಿದ್ದೀರಿ. ಇದರ ಹೊರತಾಗಿ ಇಡೀ ಪಠ್ಯದಲ್ಲಿ ಅಲ್ಲದೆ ಹೋದರೂ ಸಂಭಾಷಣೆ, ವಿವರಣೆಗಳಲ್ಲಿ ಅಲ್ಲಲ್ಲಿ ಪರಿಣಾಮಕಾರಿಯಾಗಿ ಹಲವರು ಬಳಸಿರುವುದುಂಟು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಮೊರಸುಗನ್ನಡದ ಸದ್ದು ಹೇಗಿದೆ? ಪ್ರವೇಶ ತಡವಾಯಿತೇ? ಸಿಗಬೇಕಾದ ಮನ್ನಣೆ ಸಿಕ್ಕಿದೆಯೇ? ಇಲ್ಲವೆಂದಲ್ಲಿ ಕಾರಣಗಳಾದರೂ ಏನು?**

ತಡವಾಗಿದೆ ಅನ್ನುವುದಕ್ಕಿಂತ ತೀರಾ ತಡವಾಗಿಬಿಟ್ಟಿದೆ ಅಂತ ಬಳಸೋದು ಒಳ್ಳೇದು. ಆಮೇಲೆ ಮೊರಸುನಾಡು ಕನ್ನಡ ಅಂತಲೇ ಕರೆಯಬೇಕಾಗುತ್ತದೆ. ಯಾಕಂದ್ರೆ ನಾವು ಇವತ್ತು ಮೊರಸುನಾಡು ಪರಿಕಲ್ಪನೆಗೆ ಬಂದಿದ್ದೀವಿ. ಕೋಲಾರ ಜಿಲ್ಲೆ ಅಥವಾ ಅವಿಭಜಿತ ಕೋಲಾರ-ಚಿಕ್ಕಬಳ್ಳಾಪುರ ಅಂತಿಲ್ಲ ಇವತ್ತು. ದಾಟಿದ್ದೇವೆ ಅದನ್ನ. ಎಲ್ಲಿಯವರೆಗೂ ನಾವು ತಗೊಂಡಿದ್ದೇವೆ ಅಂದ್ರೆ ಪುಂಗನೂರು, ಮದನಪಲ್ಲಿ, ಬೀರಂಗಿ ಕೊತ್ತಕೋಟ, ಚಿತ್ತೂರಿನ ಕೆಲವು ಭಾಗ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ದೊಡ್ಡಬಳ್ಳಾಪುರ, ಹೊಸಕೋಟೆ, ಆಮೇಲೆ ಹೊಸೂರು, ಡಂಕಣಿಕೋಟ – ಈ ಎಲ್ಲಾ ಕಡೆ ಕನ್ನಡಾನೂ ಇದೆ ತೆಲುಗೂನೂ ಇದೆ ತಮಿಳೂ ಇದೆ. ಆದ್ದರಿಂದ ಮೊರಸುನಾಡು ಕನ್ನಡ ಪೂರ್ಣ ಪ್ರಮಾಣದ ಸಾಹಿತ್ಯಕ ಭಾಷೆಯಾಗುವ ಎಲ್ಲ ಶಕ್ತಿ ಸಾಮರ್ಥ್ಯವನ್ನು ಒಳಗೊಂಡಿದೆ. ಇದಕ್ಕೆ ಉದಾಹರಣೆಗೆ ನಿಮ್ಮ 'ನಾಗ್ದಾಳೆ'ನ ತಗೋಬಹುದು. ಕಾವ್ಯಕ್ಕೆ ಒಗ್ಗಿದ ಭಾಷೆ ಗದ್ಯಕ್ಕೂ ಒಗ್ಗಬೇಕಲ್ಲ. ಒಗ್ತುತ್ತಲ್ವ? ನಮ್ಮ ಈ ಮೊರಸುನಾಡು ನೆಲದ ಲೇಖಕರಲ್ಲಿ ತೆಲುಗು ಲೇಖಕರು ಇಲ್ಲಿನ ಭಾಷೆಯನ್ನ (ತೆಲುಗನ್ನ) ಬಳಸಿದಷ್ಟು ಸಮೃದ್ಧವಾಗಿ, ನಿಸ್ಸಂಕೋಚವಾಗಿ ಬಳಸಿದಷ್ಟು ಕನ್ನಡ ಲೇಖಕರು ಬಳಸ್ತಾ ಇಲ್ಲ. ಏನಿದ್ದರೂ ನಾವು ತೊಳೆದು ಪಾಲಿಶ್ ಮಾಡಿದ ಕನ್ನಡವನ್ನ ಎರವಲಾಗಿ ಬಳಸ್ತಾ ಇದೇವೆ ಹೊರತು ನಮ್ಮದನ್ನಲ್ಲ. ಕನ್ನಡನಾಡಿನ ಒಳಗಡೆ ಬಂದರೂ ಕೂಡ ನನ್ನದೇ ಆದ ಒಳಧ್ವನಿ ಇನ್ನೊಂದು ಕನ್ನಡ ಆಗಿರ್ತದೆ. ನಾವು ಹೊರಧ್ವನಿ ಕನ್ನಡವನ್ನ ತಗೊಂಡು ಬರೀತಾ ಇದೀವಿ. ಈ ತಪ್ಪು ಭಾಷೆಯದ್ದಲ್ಲ, ಇದು ಲೇಖಕನ ದೌರ್ಬಲ್ಯ. ಈಗ ಉತ್ತರ ಕರ್ನಾಟಕ, ದಕ್ಷಿಣ ಕನ್ನಡ ಇಂತಹ ಪ್ರದೇಶಗಳ ಲೇಖಕರಿಗಿರುವಂತಹ ಭಾಷಿಕ ಒತ್ತಡವನ್ನು ನಾವು ಸ್ವೀಕರಿಸ್ತಾ ಇಲ್ಲ. ಆಮೇಲೆ ನೀವು ಹೇಳಿದ ಉದಾಹರಣೆಗಳಲ್ಲಿ ಕೆಲವು ಪುಸ್ತಕಗಳನ್ನು ಬಿಟ್ಟರೆ ಎಲ್ಲವೂ ಪರಿಪೂರ್ಣವಾದ ಮೊರಸುನಾಡು ಕನ್ನಡದಲ್ಲಿ ಇಲ್ಲ. ಒಂದು ಹಳ್ಳಿ ಅಥವಾ ಒಂದು ಸಣ್ಣ ಪ್ರದೇಶಕ್ಕೆ ಸೀಮಿತವಾಗಿವೆ. ಇನ್ನೊಂದು, ನಾವು ಏನು ಈ ಉದಾಹರಣೆಗಳನ್ನು ತಗೋತೀವಿ. ಸದ್ಯಕ್ಕೆ ನಾಲ್ಕೈದು. ಇಲ್ಲಿ ನಮ್ಮ ಮೊರಸುನಾಡು ಕನ್ನಡದ ಬಳಕೆಯಲ್ಲಿ ಅಲ್ಲಲ್ಲಿ ಕಾಣಿಸುವ ಹಳಗನ್ನಡ ಶಬ್ದಗಳನ್ನ